

# ಸೌರಶಕ್ತಿಯ ವಿಮಾನ!

ಇನ್ನೇನು ಎಲ್ಲರೂ ಹಾರಾಡಬಹುದು !

ದೇವತೆಗಳ ಕಾಲದಲ್ಲಿ ಪುಷ್ಪಕ ವಿಮಾನ. ನಮ್ಮ ಕಾಲದಲ್ಲಿ ರೈಟ್ ಸಹೋದರರು ಸಿದ್ಧಗೊಳಿಸಿದ ಪೆಟ್ರೋಲ್ ಚಾಲಿತ ವಿಮಾನ, ಈಗ ಸೂರ್ಯನ ಶಕ್ತಿಯಿಂದ ಚಾಲನೆಯಾಗುವ ವಿಮಾನ ಕಂಡು ಹಿಡಿದ ಹಿರಿಮೆ ಸ್ವಿಸ್ ಮೂಲದ ಬೆಟ್ರ್ಯಾಂಡ್ ಪಿಕಾರ್ಡ್‌ನದು.

ಏಳು ವರ್ಷಗಳ ಸತತ ಪರಿಶ್ರಮದಿಂದ ಬೆಟ್ರ್ಯಾಂಡ್ ಪಿಕಾರ್ಡ್ ತನ್ನ ತಂಡದೊಂದಿಗೆ ಸಿದ್ದಗೊಳಿಸಿದ ಸೂರ್ಯ ಇಂಧನದಿಂದ ಚಲಿಸುವ ವಿಮಾನ 'ಸೋಲಾರ್ ಇಂಪಲ್ಸ್' ಏಪ್ರಿಲ್ 7 ರಂದು ಯಶಸ್ವಿ ಹಾರಾಟ ನಡೆಸಿತು.

12,000 ಸೋಲಾರ್ ಸೆಲ್ಸ್‌ನಿಂದ ಸಿದ್ದಗೊಳಿಸಿದ ಈ ವಿಮಾನ 4,000 ಅಡಿಗಳ ಎತ್ತರದಲ್ಲಿ ಸುಮಾರು 87 ನಿಮಿಷಗಳ ಕಾಲ ಯಶಸ್ವಿ ಹಾರಾಟ ನಡೆಸಿತು. ವಿಮಾನ ಹಾರಾಟ ನಡೆಸಿದ ಪೈಲಟ್ ಮಾರ್ಕಸ್ ಶೆರ್ಹಡೆಲ್, 'ಅದೊಂದು ಸಂತಸದ ಕ್ಷಣ' ಎಂದಿದ್ದಾನೆ.

208 ಅಡಿಗಳಷ್ಟು ಅಗಲದ ರೆಕ್ಕೆಗಳನ್ನು ಹೊಂದಿರುವ ಸೋಲಾರ್ ಇಂಪಲ್ಸ್, 3,500 ಪೌಂಡ್ಸ್ ತೂಕವನ್ನು ಮಾತ್ರ ಹೊತ್ತೊಯ್ಯುತ್ತದೆ. ಬೋಯಿಂಗ್ 787 ವಿಮಾನ 198 ಅಡಿಗಳಷ್ಟು ಅಗಲ ರೆಕ್ಕೆಗಳನ್ನು ಹೊಂದಿದ್ದು 4,99,000 ಪೌಂಡ್ ತೂಕವನ್ನು ಹೊತ್ತೊಯ್ಯುತ್ತದೆ.

36 ಗಂಟೆಗಳ ಕಾಲದ ಹಾರಾಟ, ರಾತ್ರಿ ವೇಳೆ ಹಾರಾಟ, ಹೆಚ್ಚು ತೂಕವನ್ನು ಹೊತ್ತೊಯ್ಯುವ ಶಕ್ತಿಯುತ ವಿಮಾನವನ್ನು ಕಂಡು ಹಿಡಿಯುವ ಗುರಿಯನ್ನು ಈ ಸಂಶೋಧಕನ ತಂಡ ಹೊಂದಿದೆ. 2012ರ ಹೊತ್ತಿಗೆ ಅವಿಷ್ಕಾರಗೊಳಿಸಿದ ವಿಮಾನವನ್ನು ಸಿದ್ದಗೊಳಿಸುವ ವಿಶ್ವಾಸವನ್ನು ಸಹ ಅವರು ವ್ಯಕ್ತಪಡಿಸಿದ್ದಾರೆ. 2012ಕ್ಕೆ ಬಹಳ ಮಂದಿ ಕಾದು ಕುಳಿತಿದ್ದಾರೆ. ನಾವೂ ಸೌರಶಕ್ತಿಯ ವಿಮಾನಕ್ಕಾಗಿ ಕಾದು ಕುಳಿತುಕೊಳ್ಳಲು ಅಡ್ಡಿಯಿಲ್ಲ!

■ ವಸಂತ ಮಾಲವಿ



